(ದಿನಾಂಕ 16-03-2019 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣಿಕರಿಸಲಾಯಿತು.)

**ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಎಸ್.ಬಿ.ವಿ. ವಕೀಲರಿಂದಃ-**

ಸದರಿ ದಾವೆ ಹಾಕುವುದಕ್ಕಿಂತ ಮುಂಚೆ ಅಸಲು ದಾವೆ ಸಂಖ್ಯೆಃ 245/2014 ನ್ನು ಹಾಕಿದ್ದೇವೆ ಎಂದರೆ ಸರಿ. ಸದರಿ ಹಳೆಯ ದಾವೆಯನ್ನು ಪಾಲು ವಿಭಾಗಕ್ಕಾಗಿ ನನ್ನ ತಂದೆಯ ಮೇಲೆ ಹಾಕಿರುತ್ತೇನೆ. ಪ್ರಸ್ತುತ ದಾವೆಯನ್ನು ನನ್ನ ತಂದೆಯ ಮೇಲೆ ಹಾಕಿರುತ್ತೇನೆ. ನಾನು ಈಗ ಗಂಡನ ಮನೆಯಾದ ಹಡಗಲಿ ತಾಲೂಕಿನ ಕಾಗನೂರುನಲ್ಲಿ ವಾಸವಾಗಿರುತ್ತೇನೆ. ನನ್ನ ತಾಯಿಯ ಹೆಸರು ರೇಣುಕಮ್ಮ ಆಗಿರುತ್ತದೆ. ಈಗ ಅವರು ಹಡಗಲಿ ತಾಲೂಕಿನ ತಳಕಲ್ಲು ಗ್ರಾಮದಲ್ಲಿ ಮರಣ ಹೊಂದಿರುತ್ತಾರೆ. ನಾನು ಚಿಕ್ಕವಳಾಗಿದ್ದಾಗಿನಿಂದ ನನ್ನ ತಾಯಿ ತಳಕಲ್ಲು ಗ್ರಾಮದಲ್ಲಿ ವಾಸವಾಗಿರುತ್ತಾರೆ. ಸುಮಾರು 35 ವರ್ಷಗಳಿಂದ ನನ್ನ ತಾಯಿ ತಳಕಲ್ಲು ಗ್ರಾಮದಲ್ಲಿ ಇದ್ದಿರುತ್ತಾರೆ. ನನ್ನ ತಂದೆಯದ್ದು ಹಂಪಸಾಗರ ಗ್ರಾಮವಾಗಿದ್ದು ಅವರು ಹಡಗಲಿ ತಾಲೂಕಿನ ವರಕನಹಳ್ಳಿಯಲ್ಲಿ ವಾಸವಾಗಿರುತ್ತಾರೆ. ನನ್ನ ಕುಟುಬಂಕ್ಕೆ ಸಂಬಂದಪಟ್ಟಂತಹ ಆಸ್ತಿಗಳು ಇರುವುದು ಹಂಪಸಾಗರದಲ್ಲಿ ಎಂದರೆ ಸರಿ. ನನ್ನ ತಾಯಿ ಹಡಗಲಿ ನ್ಯಾಯಾಲಯದಲ್ಲಿ ಎರಡು ದಾವೆಗಳನ್ನು ಹಾಕಿದ್ದರು ಎಂದರೆ ಸರಿ. ನ್ಯಾಯಾಲಯದಲ್ಲಿ ಆ ದಾವೆಗಳು ಏನು ಆಗಿವೆ ಎಂದು ನನಗೆ ಗೊತ್ತಿಲ್ಲ. ಮೈಲಪ್ಪ ರೇಣುಕಮ್ಮನೊಂದಿಗೆ ಯಾವುದೇ ಸಂಬಂದವಿಲ್ಲ ವೆಂದು ಹೇಳಿದ್ದೇನೆ ಎಂದರೆ ಸರಿಯಲ್ಲ. ಮೊದಲು ಹಾಕಿದ ದಾವೆಯಲ್ಲಿ ಸೂರ್ಯ ನಾರಾಯಣ ರಾಜುರವರನ್ನು ಸೇರಿಸಿದ್ದೇವು ಎಂದರೆ ಸರಿ. ಈ ದಾವೆಯಲ್ಲಿ ಅವರನ್ನು ಸೇರಿಸಿಲ್ಲ ಎಂದರೆ ಸರಿ. ಮೈಲಪ್ಪ ಪ್ರತಿವಾದಿ 1 ರವರು ದಾವಾ ಆಸ್ತಿಯ ಒಂದು ಆಸ್ತಿಯನ್ನು ಸುರೇಂದ್ರಬಾಬು ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಸದರಿ ಮಾರಾಟ ಮಾಡಿದ ಆಸ್ತಿಯುಲ್ಲಿ ನನಗೆ ಭಾಗ ಇದ್ದಿರುತ್ತದೆ. ಸರ್ವೆ ನಂಬರ್ 407/ಜಿ/1 ರ 86 ಸೆಂಟ್ಸ್‌ಗೆ ಮೈಲಪ್ಪನಿಗೆ ಯಾವುದೇ ಸಂಬಂದವಿಲ್ಲ ಎಂದರೆ ಸರಿಯಲ್ಲ. ಈಗ ಸದರಿ ಆಸ್ತಿಯು ಭಾವಿಮನಿ ಕಾಳಮ್ಮನ ಹೆಸರಿಗೆ ಇದೆ ಎಂದರೆ ಸರಿಯಲ್ಲ. 202/2 ರ ಮನೆಗೂ ಮೈಲಪ್ಪನಿಗೂ ಯಾವುದೇ

ಸಂಬಂದವಿಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿ ಭಾವಿಮನಿ ಕಾಳಮ್ಮನ ಹೆಸರಿಗೆ ಇದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸದರಿ ಆಸ್ತಿಯು ನನ್ನ ಅಜ್ಜನಾದ ಮರಿಯಪ್ಪನ ಹೆಸರಿನಲ್ಲಿ ಇದೆ ಎಂದು ಹೇಳಿರುತ್ತಾರೆ. ಡೋರ್ ನಂಬರ್ 2/15 ವಿಸ್ತೀರ್ಣ 30 X 60 ಸರ್ಕಾರ ನನ್ನ ಅಜ್ಜ ಮರಿಯಪ್ಪನಿಗೆ ನೀಡಿರುವ ಆಸ್ತಿ ಎಂದರೆ ಸರಿ. ಅದಕ್ಕೂ ಮೈಲಪ್ಪನಿಗೂ ಯಾವುದೇ ಸಂಬಂದವಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂಬರ್ 81/ಬಿ/1 ವಿಸ್ತೀರ್ಣ 1 ಎಕರೆ 70 ಸೆಂಟ್ಸ್ ಮೈಲಪ್ಪನ ಸ್ವಂತ ಆಸ್ತಿ ಎಂದರೆ ಸರಿಯಲ್ಲ. ನಾವು ದಾವೆಯನ್ನು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ ಯತಾಪ್ರಕಾರ ದಾವೆ ಸಲ್ಲಿಸುತ್ತೇವೆ ಎಂದು ಹೇಳಿದ್ದೇವೆ ಎಂದರೆ ಸರಿಯಲ್ಲ. ಸದರಿ ದಾವೆಯುಲ್ಲಿರುವ ಪಕ್ಷಗಾರರು ಹಾಗೂ ಆಸ್ತಿಗಳು ಬೇರೆ ಎಂದರೆ ಸರಿ. ನನಗೂ ಮೈಲಪ್ಪನಿಗೂ ಯಾವುದೇ ಸಂಬಂದ ಇಲ್ಲದೇ ಇದ್ದರೂ ನಾನು ದಾವಾ ಆಸ್ತಿ ಕಬಳಿಸುವ ಉದ್ದೇಶದಿಂದ ನ್ಯಾಯಾಲಯಕ್ಕೆ ಸುಳ್ಳು ಮಾಹಿತಿಯನ್ನು ನೀಡಿ, ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ :-ಇಲ್ಲ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ,
ಹಗರಿಬೊಮ್ಮನಹಳ್ಳಿ.